ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
**ಸಿ.ಸಿ. ನಂ: 57/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚಿದಾನಂದ ರಾವ್ | ಪಿ.ಡಬ್ಲ್ಯೂ-**04** |
| ತಂದೆಯ ಹೆಸರು | : | ಲೇಟ್ ಎಂ ಗೋವಿಂದ ರಾವ್ | ಸಿ.ಡಬ್ಲ್ಯೂ-**12** |
| ವಯಸ್ಸು | : | **64** ವರ್ಷ | |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ **07.07.2026.** |
| ವಾಸಸ್ಥಳ | : | ಹೊಸಪೇಟೆ | |

ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ26.02.2009 ರಿಂದ ದಿಃ05.08.2009 ರವರೆಗೆ ಹೊಸಪೇಟೆ ಬಡವಣೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 03.06.2009 ರಂದು ಸಂಜೆ 4.00 ಗಂಟೆಗೆ ನಮ್ಮ ಠಾಣೆಯ ಸಿಬ್ಬಂದಿಗಳಾದ ಚಾಸಾ 6 ರಿಂದ ಚಾಸಾ 10 ರವರೊಂದಿಗೆ ಸರ್ಕಾರಿ ಜೀಪ್ ನಲ್ಲಿ ಠಾಣಾ ಸರಹದ್ದಿನಲ್ಲಿ ಗಸ್ತು ತಿರಗುತ್ತಾ ಸಂಜೆ 5.00 ಗಂಟೆಯ ಸುಮಾರಿಗೆ ಧಾರವಾಡ ಚೆಕ್ ಪೋಸ್ಟ್ ಬಳಿ ಬಂದಾಗ 3 ಜನ ವ್ಯಕ್ತಿಗಳು ಅನುಮಾನಸ್ಪದವಾಗಿ ಹಳೆ ಸಿಮೆಂಟ್ ಚೀಲದಲ್ಲಿ ಯಾವುದೊ ಕಬ್ಬಿಣದ ವಸ್ತುಗಳನ್ನು ಹಿಡಿದುಕೊಂಡು ನಿಂತಿದ್ದು, ನಮ್ಮನ್ನು ನೋಡಿದ ತಕ್ಷಣ ಅವರು ಅಲ್ಲಿಂದ ಪರಾರಿಯಾಗಲು ಪ್ರಯತ್ನಿಸಿರುತ್ತಾರೆ. ಸಿಬ್ಬಂದಿಗಳ ಸಹಾಯದಿಂದ ಹಿಡಿದು, ವಿಚಾರಿಸಲಾಗಿ ವಸ್ತುಗಳ ಬಗ್ಗೆ ಸಮರ್ಪಕವಾದ ಉತ್ತರ ಕೊಡದೆ ಇದ್ದರಿಂದ ಅವುಗಳ ಚೀಲ ಬಿಚ್ಚಿ ನೋಡಿದಾಗ ಅವುಗಳಲ್ಲಿ ಕಬ್ಬಿಣದ ವಸ್ತುಗಳು, ಚಾರ್ಜರ್, ಒಂದು ಚಾಕು, ಪ್ರೊಕ್ಲಾಯನ್ ಆಪರೇಟರ್ ಕನಟ್ರೊಲರ್ ಕಂಡು ಬಂದಿರುತ್ತವೆ. ಅವುಗಳನ್ನು ಎಲ್ಲಿಂದ ತಂದಿರುವುದಾಗಿ ವಿಚಾರಿಸಿದಾಗ ಎಂ.ಎಸ್.ಪಿ.ಎಲ್ ನ ಬನಶಂಕರಿ ಮೈನ್ಸ್ ಮತ್ತು ಎಸ್.ವಿ.ಕೆ ಕಂಪನಿಯ ಮೈನ್ಸ್ ಏರಿಯಾದಲ್ಲಿ ಕಳುವು ಮಾಡಿದ್ದು, ಅಲ್ಲಿ ಅವುಗಳನ್ನು

ಬಚ್ಚಿಟ್ಟಿದ್ದು, ಆ ನಂತರ ಈ ದಿನ ಅವುಗಳನ್ನು ಮಾರಾಟ ಮಾಡಲು ಹೊಸಪೇಟೆಗೆ ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ.

ನಂತರ ಚಾಸಾ 8 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರುಗಳ ಬಳಿ ಇದ್ದ ವಸ್ತುಗಳನ್ನು ಹಾಗೂ ಅವರನ್ನು ವಿಚಾರಸಿ ಪಂಚನಾಮೆಯ ಮುಖಾಂತರ ವಶಕ್ಕೆ ಪಡೆದು, ಅವುಗಳ ಬೆಲೆಯನ್ನು ಗುರುತಿಸಲು ಸ್ಥಳಕ್ಕೆ ಓಲ್ವೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಜಾವೆದ್ ಎಂಬುವವರನ್ನು ಕರೆಯಿಸಿ ಅವುಗಳ ಬೆಲೆಯನ್ನು ನಿರ್ಧರಿಸಿ ವಶಕ್ಕೆ ಪಡೆದು, ಹಾಗೂ ಆರೋಪಿತರೊಂದಿಗೆ ಠಾಣೆಗೆ ಬಂದು ಠಾಣಾ ಮೊಕದ್ದಮೆ ಸಂಖ್ಯೆ: 27/2009 ರಂತೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ನಂತರ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದು, ಆರೋಪಿತನ ದಸ್ತಗಿರಿ ಕ್ರಮ ಅನುಸರಿಸಿ, ಠಾಣಾ ಸಿಬ್ಬಂದಿಯವರು ಲಾಕಪ್‌ನಲ್ಲಿ ಇಟ್ಟುಕೊಂಡು ಮರುದಿನ ಆರೋಪಿತರೊಂದಿಗೆ ಆರೋಪಿತರು ಕಳುವು ಮಾಡಿದಂತಹ ವಸ್ತುಗಳನ್ನು ಬಚ್ಚಿ ಇಟ್ಟ ಸ್ಥಳದ ಪಂಚನಾಮೆಯನ್ನು ಪಂಚರೊಂದಿಗೆ, ಎಂ.ಎಸ್.ಪಿ.ಎಲ್ ಕಂಪನಿಯ ಬನಶಂಕರಿ ಮೈನ್ಸನಲ್ಲಿ ಹಾಗೂ ಎಸ್.ವಿ.ಕೆ ಕಂಪನಿಯ ಮೈನ್ಸ್ ಏರಿಯಾದಲ್ಲಿ ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿ ಠಾಣಾಗೆ ವಾಪಸ್ಸು ಬಂದು ಆರೋಪಿತರನ್ನು ಮಾನ್ಯ ನ್ಯಾಯಾಲಯಕ್ಕೆ ಸಿಬ್ಬಂದಿಗಳ ಬೆಂಗಾವಲಿನಲ್ಲಿ ಕಳುಹಿಸಿಕೊಟ್ಟಿರುತ್ತೇನೆ.

ನಂತರ ಸಿಬ್ಬಂದಿಗಳಾದ ಚಾಸಾ6 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಕೃತ್ಯ ಸ್ಥಳವು ಸಂಡೂರು ಪೊಲೀಸ ಠಾಣಾ ಸರಹದ್ದಿನಲ್ಲಿ ಬರುವುದರಿಂದ ನ್ಯಾಯಾಲಯದಿಂದ ಪರವಾನಿಗೆ ಪಡೆದು, ಹಾಗೂ ವಶಪಡೆಸಿಕೊಂಡಿರುವ ವಸ್ತುಗಳನ್ನು ಸಹ ಪರವಾನಿಗೆಯ ಮೂಲಕ ಮುಂದಿನ ತನಿಖೆಗಾಗಿ ಡಿ.ವೈ.ಎಸ್.ಪಿ ಹೊಸಪೇಟೆ ರವರ ಮುಖಾಂತರ ಸಂಡೂರು ಪೊಲೀಸ ಠಾಣೆಗೆ ವರ್ಗಾವಣೆ ಮಾಡಿರುತ್ತೇನೆ.

ಆ ದಿನ ಜಪ್ತು ಪಡೆಸಿಕೊಂಡ ಮುದ್ದೆ ಮಾಲಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಅನುಮತಿಸಲಾಯಿತು. )**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.